(ಕಂದಾಯ ಇಲಾಖೆ)

# ಸಹಾಯಕಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:42/2015-16 ದಿನಾಂಕ:07.06.2016.

ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ
ಸಹಾಯಕ ಆಯುಕ್ತರು, ಹೊಸಪೇಟೆ.

********

**ವಾದಿಗಳು: ಶ್ರೀ/ ಶ್ರೀಮತಿ**

1. ಪಿ.ಬಸಣ್ಣ ತಂದೆ ದಿ॥ ಪಿ.ಈರಪ್ಪ,
2. ಮಲ್ಲಮ್ಮ ಗಂಡ ಪಿ.ಬಸಣ್ಣ,
3. ಕೊಟ್ರೇಶ್ ತಂದೆ ಪಿ.ಬಸಣ್ಣ,
4. ವೀರೇಶ್ ತಂದೆ ಪಿ.ಬಸಣ್ಣ,
5. ಬಸವರಾಜ ತಂದೆ ಪಿ.ಬಸಣ್ಣ,

**ಮೇಲಿನ ಎಲ್ಲರ ವಾಸ**: ಹೊಸೂರು ಗ್ರಾಮ,
ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ.

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ತಹಶೀಲ್ದಾರರು, ಹೊಸಪೇಟೆ.
2. ಕಂದಾಯ ನಿರೀಕ್ಷಕರು, ಹೊಸಪೇಟೆ.

**ವ್ಯಾಜ್ಯದಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಹೊಸಪೇಟೆ | ಹೊಸೂರು | 870/2 | 00 ಎಕರೆ 76 ಸೆಂಟ್ಸ್ |
| | | | 879/2 | 00 ಎಕರೆ 17 ಸೆಂಟ್ಸ್ |
| | | | 880/3 | 00 ಎಕರೆ 23 ಸೆಂಟ್ಸ್ |

**ಪೀಠಿಕೆ:-**

ಹೊಸಪೇಟೆ ತಾಲೂಕು ಹೊಸಪೇಟೆ ಹೋಬಳಿ ಹೊಸೂರು ಗ್ರಾಮದ ಸ.ನಂ. 870/2 ಪೈಕಿ ವಿಸ್ತೀರ್ಣ:00 ಎಕರೆ 76 ಸೆಂಟ್ಸ್; ಸ.ನಂ.879/2 ಪೈಕಿ ವಿಸ್ತೀರ್ಣ:00 ಎಕರೆ 17 ಸೆಂಟ್ಸ್; ಸ.ನಂ.880/3 ಪೈಕಿ ವಿಸ್ತೀರ್ಣ:00 ಎಕರೆ 23 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಹೊಸಪೇಟೆ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್.76/2014-15 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ವಾದಿಗಳು ದಿನಾಂಕ:10.07.2015 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಗಳು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:23.07.2015 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಗಳ ಪ್ರಕಾರ, ಸದರಿ ವ್ಯಾಜ್ಯದ ಜಮೀನು ಮೂಲತ: ವಾದಿ-1 ರವರಾದ ಪಿ.ಬಸಣ್ಣ ತಂದೆ ದಿ॥ ಪಿ.ಈರಪ್ಪ, ಇವರಿಗೆ ಸಂಬಂಧಿಸಿದ್ದು, ವಾದಿಗಳೆಲ್ಲರು ಒಂದೇ ಕುಟುಂಬದವರಾಗಿದ್ದು, ವಾದಿ-1 ರಿಂದ 5 ರವರು ಏಕಸ್ತರಾಗಿ ನೋಂದಾಯಿತ ಪಾಲು ವಿಭಾಗ ದಸ್ತಾವೇಜು ಸಂಖ್ಯೆ:84/2015-16 ದಿನಾಂಕ:08.05.2015 ರ ಪ್ರಕಾರ ಪಾಲು ವಿಭಾಗ ಮಾಡಿಕೊಂಡಿದ್ದು, ಸದರಿ ವ್ಯಾಜ್ಯದ ಜಮೀನುಗಳು ಪಾಲು ವಿಭಾಗದ ಪ್ರಕಾರ ವಾದಿ-3 ರವರ ಪಾಲಿಗೆ ಬಂದಿರುವುದು ಕಂಡು ಬಂದಿರುತ್ತದೆ.

ಸದರಿ ಪಾಲು ವಿಭಾಗ ದಸ್ತಾವೇಜನ್ನು ನೋಂದಣಿ ಮಾಡುವ ಸಮಯದಲ್ಲಿ ಕಾವೇರಿ ತಂತ್ರಾಂಶದಲ್ಲಿ ಗಣಕೀಕರಣ ಮಾಡುವಾಗ 3, 4 ಮತ್ತು 5 ನೇ ಇಸುಂಗಳ ಹೆಸರನ್ನು ಪಿ.ಕೊಟ್ರೇಶ್ ತಂದೆ ಪಿ.ಬಸಣ್ಣ ಎಂದು ಮಾಡುವ ಬದಲಾಗಿ ಪಿ.ಕೊಟ್ರೇಶ್ ತಂದೆ ಪಿ.ಈರಪ್ಪ ಎಂದು; ಪಿ.ವೀರೇಶ್ ತಂದೆ ಪಿ.ಬಸಣ್ಣ ಎಂದು ಮಾಡುವ ಬದಲಾಗಿ ಪಿ.ವೀರೇಶ್ ತಂದೆ ಪಿ.ಈರಪ್ಪ ಎಂದು; ಹಾಗೂ ಪಿ.ಬಸವರಾಜ ತಂದೆ ಪಿ.ಬಸಣ್ಣ ಎಂದು ಮಾಡುವ ಬದಲಾಗಿ ಪಿ.ಬಸವರಾಜ ತಂದೆ ಪಿ.ಈರಪ್ಪ ಎಂದು ತಪ್ಪಾಗಿ ಗಣಕೀಕರಣ ಆಗಿ ನೋಂದಣಿಯಾಗಿ ಭೂಮಿ ತಂತ್ರಾಂಶಕ್ಕೆ ಹಕ್ಕು ಬದಲಾವಣೆಗೆ ಹೋದ ನಂತರ ಸದ್ರಿ ನೋಂದಾಯಿತ ದಸ್ತಾವೇಜಿನಲ್ಲಿಯುಂಟಾದ ತಪ್ಪಿನಿಂದ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್.76/14-15

ರ ಮೂಲಕ ನಮೂನೆ-21 ರಲ್ಲಿ ಕೊಟ್ರೇಶ್‌ಪಿ. ತಂದೆ ಲೇಟ್ ಪಿ.ಈರಪ್ಪ ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದ್ದರಿಂದ ಡಾಕುಮೆಂಟ್‌ಗೂ ಮತ್ತು ಚೆಕ್‌ಲಿಸ್ಟ್‌ಗೂ ವ್ಯತ್ಯಾಸವಿರುತ್ತದೆ ಎಂದು ಸದರಿ ವಹಿವಾಟು ತಿರಸ್ಕೃತ ಗೊಂಡಿರುತ್ತದೆ. ಸದರಿ ಹಕ್ಕು ಬದಲಾವಣೆ ತಿರಸ್ಕೃತಗೊಂಡ ಬಗ್ಗೆ ತಿಳಿದ ವಾದಿಗಳು ದಸ್ತಾವೇಜು ಸಂಖ್ಯೆ:2002/2015-16 ದಿನಾಂಕ:08.07.2015 ರ ಮೂಲಕ ವಾದಿಗಳು ಪಾಲು ವಿಭಾಗ ಪತ್ರ ಸರ್ವಣ ಪತ್ರ ದ್ವಾರ 3, 4 ಮತ್ತು 5 ನೇ ಇಸುಂಗಳ ತಂದೆಯ ಹೆಸರನ್ನು ಕಾವೇರಿ ತಂತ್ರಾಂಶದಲ್ಲಿ ಸರಿಪಡಿಸಿಕೊಂಡಿದ್ದು ಈ ಬಗ್ಗೆ ನೋಂದಾಯಿತ ಪಾಲು ವಿಭಾಗ ಪತ್ರ ಸರ್ವಣ ಪತ್ರ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಸ್ಥಳ ವ್ಯಾಜ್ಯದ ಜಮೀನಿನ ತನಿಖೆ ಕೈಗೊಂಡು ವರದಿ ಸಲ್ಲಿಸಲು ತಿಳಿಸಿದ್ದು, ಈ ಬಗ್ಗೆ ತಹಶೀಲ್ದಾರರು, ಹೊಸಪೇಟೆ ಇವರ ಕಾರ್ಯಾಲಯದ ಪತ್ರ ಸಂಖ್ಯೆ: ಸಂ/ಕಂ/ಪಹಣಿ/ಅಪೀಲು/99/2015-16 ದಿನಾಂಕ:23.11.2015 ರ ಮೂಲಕ ಕಂದಾಯ ನಿರೀಕ್ಷಕರು, ಹೊಸಪೇಟೆ ಇವರು ಹೊಸೂರು ಗ್ರಾಮದ ಗ್ರಾಮಲೆಕ್ಕಾಧಿಕಾರಿಯೊಂದಿಗೆ ಸ್ಥಾನಿಕ ವಿಚಾರಣೆ ನಡೆಸಿ, ಸಲ್ಲಿಸಿದ ಸ್ಥಳ ತನಿಖಾ ವರದಿಯಲ್ಲಿ ವಾದಿ-3, 4 ಮತ್ತು 5 ರವರ ತಂದೆಯ ಹೆಸರು ಸದರಿ ಪಾಲಿ ವಿಬಾಗ ದಸ್ತಾವೇಜಿನಲ್ಲಿ ತಪ್ಪಾಗಿ ನಮೂದಾಗಿದ್ದು, ಸದರಿ ಪ್ರಶ್ನಿತ ಹಕ್ಕು ಬದಲಾವಣೆ ತಿರಸ್ಕೃತಗೊಂಡಿರುವುದಾಗಿ, ನಂತರದಲ್ಲಿ ವಾದಿಗಳು ಸರ್ವಣ ಪತ್ರದ ಮುಖಾಂತರ ವಾದಿ-3, 4 ಮತ್ತು 5 ರವರ ತಂದೆಯ ಹೆಸರನ್ನು ಕಾವೇರಿ ತಂತ್ರಾಂಶದಲ್ಲಿ ಸರಿಪಡಿಸಿಕೊಂಡಿದ್ದು ಈ ಬಗ್ಗೆ ನೋಂದಾಯಿತ ಪಾಲು ವಿಭಾಗ ಪತ್ರ ಸರ್ವಣ ಪತ್ರ ಸಲ್ಲಿಸಿದ್ದು, ಸದರಿ ಜಮೀನುಗಳನ್ನು ಅವರೇ ಸ್ವಾಧೀನ ಹೊಂದಿದ್ದು, ಯಾರಿಂದಲೂ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲವೆಂದು, ಆ ಪ್ರಕಾರವಾಗಿ ಹಕ್ಕು ಬದಲಾವಣೆ ಮಾಡಲು ಹೇಳಿಕೆ ಮಹಜರುಗಳನ್ನು ತಮ್ಮ ವರದಿಯೊಂದಿಗೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಹಾಗೂ ತಹಶೀಲ್ದಾರರು, ಹೊಸಪೇಟೆ ಇವರ ವರದಿ ಹಾಗೂ ಪಾಲು ವಿಭಾಗ ಪತ್ರ ಸರ್ವಣ ಪತ್ರದ ಆಧಾರದ ಮೇರೆಗೆ ಹೊಸಪೇಟೆ ತಾಲೂಕು ಹೊಸಪೇಟೆ ಹೋಬಳಿ ಹೊಸೂರು ಗ್ರಾಮದ ಸ.ನಂ. 870/2 ಪೈಕಿ ವಿಸ್ತೀರ್ಣ:00 ಎಕರೆ 76 ಸೆಂಟ್ಸ್; ಸ.ನಂ.879/2 ಪೈಕಿ ವಿಸ್ತೀರ್ಣ:00 ಎಕರೆ 17 ಸೆಂಟ್ಸ್; ಸ.ನಂ.880/3 ಪೈಕಿ ವಿಸ್ತೀರ್ಣ:00 ಎಕರೆ 23 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಹೊಸಪೇಟೆ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್.76/2014-15 ವನ್ನು ರದ್ದುಪಡಿಸುತ್ತಾ, ನೋಂದಾಯಿತ ಪಾಲು ವಿಭಾಗ ಪತ್ರ ಹಾಗೂ ನೋಂದಾಯಿತ ಪಾಲು ವಿಭಾಗ ಪತ್ರ ಸರ್ವಣ ಪತ್ರದ ಪ್ರಕಾರ ವಾದಿ-3 ರವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹೊಸಪೇಟೆ ತಾಲೂಕು ಹೊಸಪೇಟೆ ಹೋಬಳಿ ಹೊಸೂರು ಗ್ರಾಮದ ಸ.ನಂ. 870/2 ಪೈಕಿ ವಿಸ್ತೀರ್ಣ:00 ಎಕರೆ 76 ಸೆಂಟ್ಸ್; ಸ.ನಂ.879/2 ಪೈಕಿ ವಿಸ್ತೀರ್ಣ:00 ಎಕರೆ 17 ಸೆಂಟ್ಸ್; ಸ.ನಂ.880/3 ಪೈಕಿ ವಿಸ್ತೀರ್ಣ:00 ಎಕರೆ 23 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಪ್ರಶ್ನಿತ ಆದೇಶವನ್ನು ರದ್ದುಪಡಿಸುತ್ತಾ, ನೋಂದಾಯಿತ ಪಾಲು ವಿಭಾಗ ಪತ್ರ ಹಾಗೂ ನೋಂದಾಯಿತ ಪಾಲು ವಿಭಾಗ ಪತ್ರ ಸರ್ವಣ ಪತ್ರದ ಪ್ರಕಾರ **ವಾದಿ-3 ರವರ ಹೆಸರಿಗೆ** ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹೊಸಪೇಟೆ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:07.06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

**[ ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ ]**
**ಸಹಾಯಕ ಆಯುಕ್ತರು,**
**ಹೊಸಪೇಟೆ.**

ವಾದಿ : ಪ್ರತಿವಾದಿಗಳಿಗೆ

**ಪ್ರತಿಯನ್ನು**:- ತಹಶೀಲ್ದಾರರು, ಹೊಸಪೇಟೆ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ
ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.